ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER:

ದಿನಾಂಕ : DATE :

**ಭರ್ಜರಿ ಹೋರಾಟ** ಸಿದ್ದು ಸವದಿ ರಾಕ್ಷಸ ಪ್ರವೃತ್ತಿಯ ಶಾಸಕ: ಸಿದ್ದರಾಮಯ್ಯ | ಸಿದ್ದು ಸವದಿಯನ್ನು ಬಂಧಿಸಿ: ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್

# ಪುರಸಭೆ ಸದಸ್ಯೆ ಗರ್ಭಪಾತ: ಕಾಂಗ್ರೆಸ್ ಪ್ರತಿಭಟನೆ

ಮುಧೋಳ/ಬಾಗಲಕೋಟೆ: ಪುರಸಭಾ ಮಹಿಳಾ ಸದಸ್ಯೆಯನ್ನು ಶಾಸಕ ಸಿದ್ದು ಸವದಿ ಅವರು ಎಳೆದಾಡಿ ಅಸಭ್ಯವಾಗಿ ವರ್ತಿಸಿದ್ದಾರೆ ಎಂದು ಆರೋಪಿಸಿ ಪಕ್ಷದ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಬಾಗಲಕೋಟೆ ಜಿಲ್ಲೆಯ ಮಹಾಲಿಂಗಪುರದಲ್ಲಿ ಶನಿವಾರ ಕಾಂಗ್ರೆಸ್ ಕಾರ್ಯಕರ್ತರು ಭಾರಿ ಪ್ರತಿಭಟನೆ ನಡೆಸಿದರು.

ನಿಗದಿಯಂತೆ ಮಧ್ಯಾಹ್ನ 1 ಗಂಟೆಗೆ ಮೆರವಣಿಗೆ ನಡೆಸಿ ಮಹಾಲಿಂಗಪುರ ಪುರಸಭೆ ಎದುರು ಪ್ರತಿಭಟನೆಯನ್ನು ನಡೆಸಬೇಕಿತ್ತು. ಆದರೆ, ಉಭಯ ನಾಯಕರು ಪಟ್ಟಣಕ್ಕೆ ಸಂಜೆ 4ಗಂಟೆಗೆ ಆಗಮಿಸಿದ್ದರಿಂದ ಪ್ರತಿಭಟನಾ ಮೆರವಣಿಗೆಯನ್ನು ಕೈಬಿಡಲಾಯಿತು. ಮಹಾ ಲಿಂಗಪುರದ ಬಸವೇಶ್ವರ ವೃತ್ತದಲ್ಲಿ ಪ್ರತಿಭಟನೆ ಯನ್ನು ನಡೆಸಲಾಯಿತು. ಸುಮಾರು 4 ರಿಂದ 5 ಸಾವಿರ ಜನರು ಪಾಲ್ಗೊಂಡಿದ್ದರು.

ಈ ವೇಳೆ ಮಾತನಾಡಿದ ಮಾಜಿ ಸಿಎಂ, ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಅವರು, ತೇರದಾಳ ಕ್ಷೇತ್ರದ ಶಾಸಕ ಸಿದ್ದು ಸವದಿ ರಾಕ್ಷಸ ಪ್ರವೃತ್ತಿಯ ನಾಲಾಯಕ ಶಾಸಕ ಎಂದರು.

ಇದು ಸಾಮಾನ್ಯ ಅಪರಾಧವಲ್ಲ, ಮಹಿಳಾ ಸದಸ್ಯರನ್ನು ಪುರಸಭೆ ಕಾಂಪೌಂಡ್ ಗೋಡೆ ಮೇಲೆ ಎಸೆದು ಕ್ರಿಮಿನಲ್ ಮಾದರಿಯ ಕೃತ್ಯ ಎಸಗಿರುವುದು ಅಮಾನವೀಯವಾದದು. ಸಿದ್ದು ಸವದಿ ಅವರಿಗೆ ಅಧಿಕಾರದಲ್ಲಿ ಮುಂದುವರೆಯಲು ನೈತಿಕ ಹಕ್ಕಿಲ್ಲ ಎಂದರು.

**ಶಾಸಕ ಸವದಿ ಬಂಧನಕ್ಕೆ ಡಿಕೆಶಿ ಆಗ್ರಹ:** ಮಹಾಲಿಂಗಪುರದ ಪುರಸಭೆ ಚುನಾವಣೆಯಲ್ಲಿ ಮಹಿಳೆಯರ ಮೇಲಿನ ನೂಕಾಟ ಪ್ರಕರಣದಲ್ಲಿ ಭಾಗಿಯಾಗಿರುವ ಶಾಸಕ ಸಿದ್ದು ಸವದಿ ಅವರನ್ನು ಬಂಧಿಸಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆಗ್ರಹಿಸಿದರು. ಮಹಾಲಿಂಗಪುರ ಘಟನೆ ಗಮನಿಸಿದರೆ ರಾಷ್ಟ್ರದಲ್ಲಿಯೇ ಹೆಣ್ಣುಮಗಳ ಮೇಲೆ ದೊಡ್ಡ ಅವಮಾನ ಆಗಿರುವ ಘಟನೆ ಇದಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇಂತಹ ಘಟನೆಗಳು ನಡೆದಿರುವುದು ತೀವ್ರ ಖಂಡನೀಯ ಎಂದದ್ದಾರೆ.



## ಪುರಸಭೆ ಸದಸ್ಯನಿಗೆ ಹೃದಯಾಘಾತ

ಬಿಜೆಪಿ ಶಾಸಕ ಸಿದ್ದು ಸವದಿ ದೌರ್ಜನ್ಯ ಖಂಡಿಸಿ ಮಹಾಲಿಂಗಪುರದಲ್ಲಿ ನಡೆಯುತ್ತಿದ್ದ ಕಾಂಗ್ರೆಸ್ ಬೃಹತ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಪುರಸಭೆ ಸದಸ್ಯ ಜಾವೇದ ಬಾಗವಾನ್ ಅವರಿಗೆ ಹೃದಯಾಘಾತವಾಗಿದ್ದು, ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗೆ ದಾಖಲಾಗಿದೆ.

## ಕ್ಷುಲ್ಲಕ ವಿಷಯಕ್ಕೆ ದೊಡ್ಡ ಪ್ರತಿಭಟನೆ: ಸಿದ್ದು ಸವದಿ ಕಿಡಿ

ಬಾಗಲಕೋಟೆ: ಕ್ಷುಲ್ಲಕ ವಿಷಯವನ್ನು ಮುಂದಿಟ್ಟುಕೊಂಡು ಸತ್ಯವಿಲ್ಲದ ವಿಚಾರಕ್ಕೆ ಮಹತ್ವ ನೀಡಿ ಪ್ರತಿಭಟನೆ ನಡೆಸಿರುವ ಮಾಜಿ ಸಚಿವೆ ಉಮಾಶ್ರೀ ಇಂತಹ ಪ್ರತಿಭಟನೆಗಳಿಂದ ಇನ್ನೊಮ್ಮೆ ಶಾಸಕರಾಗಲು ಸಾಧ್ಯವಿಲ್ಲ ಎಂದು ಬಿಜೆಪಿ ಶಾಸಕ ಸಿದ್ದು ಸವದಿ ಕಿಡಿ ಕಾರಿದ್ದಾರೆ. ಚುನಾವಣೆಯ ನೂಕಾಟ ಆಕಸ್ಮಿಕವಾದ ಹಾಗೂ ಕ್ಷಣಾರ್ಧದಲ್ಲಿ ನಡೆದ ಘಟನೆ ಎಂದಿದ್ದಾರೆ.

